International Journal of Kannada Research
www.kannadajournal.com

ISSN: 2454–5813
IJKR 2020; 6(1): 148-149
© 2020 IJKR
www.kannadajournal.com
Received: 10-11-2019
Accepted: 12-12-2019

**ಹಣಮಂತ್ರಾಯ ಯಂಕಣ್ಣ**
ಸಂಶೋಧನಾ ವಿದ್ಯಾರ್ಥಿ, ಕನ್ನಡ ಅಧ್ಯಯನ ಸಂಸ್ಥೆ, ಗುಲಬರ್ಗಾ ವಿಶ್ವವಿದ್ಯಾಲಯ ಕಲಬುರಗಿ

**Corresponding Author:**
**ಹಣಮಂತ್ರಾಯ ಯಂಕಣ್ಣ**
ಸಂಶೋಧನಾ ವಿದ್ಯಾರ್ಥಿ, ಕನ್ನಡ ಅಧ್ಯಯನ ಸಂಸ್ಥೆ, ಗುಲಬರ್ಗಾ ವಿಶ್ವವಿದ್ಯಾಲಯ ಕಲಬುರಗಿ

# ಪ್ರೊ. ಮಾಲತಿ ಪಟ್ಟಣಶೆಟ್ಟಿಯವರ ಕವಿತೆಯಲ್ಲಿ ಸ್ತ್ರೀ ಸಂವೇದನೆ

**ಹಣಮಂತ್ರಾಯ ಯಂಕಣ್ಣ**

ಹೊಸಗನ್ನಡ ಸಾಹಿತ್ಯವು ನವ್ಯೋದಯ ಪ್ರಗತಿಶೀಲ, ನವ್ಯ, ದಲಿತ–ಬಂಡಾಯ ಎಂಬ ಕವಲುಗಳಾಗಿ ಏರ್ಪಟ್ಟು ವಿಶಾಲವಾಗಿ ಬೆಳೆಯತೊಡಗಿತು. ಒಂದೊಂದು ಘಟ್ಟಕ್ಕೂ ಒಂದೊಂದು ಮಹತ್ವವಿದೆ. ಇದರಲ್ಲಿ ಬಂಡಾಯ ಸಾಹಿತ್ಯವು ವ್ಯಕ್ತಿವಾದಿ ನೆಲೆಗೆ ವಿರುದ್ಧವಾಗಿ ಸಮಾಜವಾದಿ ನೆಲೆಯಲ್ಲಿ ಆಲೋಚಿಸಿ ಬರೆದು ಬದುಕುವ ಒಂದು ಸಮಾಜಮುಖಿ ಜನಾಂಗವನ್ನು ನಿರ್ಮಾಣ ಮಾಡುವ ಕನಸಿನೊಂದಿಗೆ ಸಾಗಿದ ಬಂಡಾಯ ಸಾಹಿತ್ಯ ಅದೊಂದು ಮನೋಧರ್ಮ ಎನ್ನುವ ಅರ್ಥ ಪಡೆದುಕೊಂಡಿತು.

ದಲಿತ–ಬಂಡಾಯ ಸಾಹಿತ್ಯದಲ್ಲಿ ಕವಿಗಳು ಎಷ್ಟು ಮುಖ್ಯವ್ರೋ ಕವಯತ್ರಿಯರು ಕೂಡ ಅಷ್ಟೇ ಮುಖ್ಯವಾಗಿದ್ದಾರೆ. ಈ ಬಂಡಾಯ ಸಾಹಿತ್ಯವನ್ನು ತಮ್ಮ ಉಸಿರನ್ನಾಗಿಸಿ ಕವಿತೆ ರಚಿಸಿದ ಕವಯಿತ್ರಿ ಎಂದರೆ ಮಾಲತಿ ಪಟ್ಟಣಶೆಟ್ಟಿಯವರು. ಆರಂಭದಲ್ಲಿ ಬಂಡಾಯ ಸಾಹಿತ್ಯ ಸಹಜವಾಗಿ ಸಿಟ್ಟು, ರೋಷ, ರೊಚ್ಚು, ಅವಮಾನವನ್ನು ಹೊರಹಾಕುವಾಗ ಅಬ್ಬರದಿಂದಲೇ ಸುತ್ತಿತ್ತು. ಬರಬರುತ್ತಾ ಹೃದಯ ಕಲಕುವ ವಿಶಾಲ ವಸ್ತುಗಳು ಬಂಡಾಯ ಕಾವ್ಯದಲ್ಲಿ ಕಾಣಿಸಿಕೊಂಡವು.

ಬಂಡಾಯ ಸಾಹಿತ್ಯದ ಅಂಶಗಳು ಮಾಲತಿ ಪಟ್ಟಣಶೆಟ್ಟಿಯವರನ್ನು ಸೆಳೆಯುವುದರ ಜೊತೆಗೆ ಸಾಕಷ್ಟು ಕವಿತೆ ಬರೆಯಲಿಕ್ಕೆ ದಾರಿ ಮಾಡಿಕೊಟ್ಟಿತು. ಮಾಲತಿಯವರ ಕವಿತೆಗಳಲ್ಲಿ ದಲಿತಸಂವೇದನೆ, ಸ್ತ್ರೀಸಂವೇದನೆ, ಸಾಮಾಜಿಕ ನ್ಯಾಯ ಧೋರಣೆ, ಬದುಕಿನ ಏಳಿಗೆಗೆ ಅಡ್ಡಿಯಾಗುವ ಶೋಷಣೆ, ಜಾತಿ, ಅಸ್ಪೃಶ್ಯತೆ, ಧರ್ಮ, ಪ್ರಭುತ್ವ, ರಾಜಕೀಯ, ಲಿಂಗಭೇದ, ವರ್ಗ ಸಂಘರ್ಷ, ಪ್ರತಿಭಟನೆ, ಬಂಡವಾಳಶಾಹಿ, ಅನಕ್ಷರತೆ, ಅಧಿಕಾರಶಾಹಿತ್ವ ಮುಂತಾದ ಅಂಶಗಳು ಸ್ಪಷ್ಟವಾಗಿ ಕಂಡುಬರುತ್ತವೆ.

ಮಾಲತಿ ಪಟ್ಟಣಶೆಟ್ಟಿಯವರ ಸ್ತ್ರೀವಾದಿ ಸಂವೇದನೆ "ನಾ ಬರಿ ಭ್ರೂಣವಲ್ಲ" ಎಂಬ ಕವಿತೆಯಲ್ಲಿ ಸ್ಪಷ್ಟವಾಗಿ ಗೋಚರಿಸುತ್ತದೆ.

"ಅವ್ವಾ
ನಾ ನಿನ್ನ ಮಗಳು
ದೇಹದ ಮುಗುಳು
ನಿನ್ನ ಕನಸಿನ ಅರಳವ್ವಾ
ನಾ ಬರಿ ಭ್ರೂಣವಲ್ಲ"
ನನ್ನವ್ವ, ಗೊತ್ತಿಲ್ಲವೆ ಮಗಳ ರಕ್ತ
ರಕ್ತವಲ್ಲ, ಪ್ರೀತಿ ರಸವೆ
ನಿನ್ನವ್ವನಾಗಿಯೇ ಬರುವೆನೆ
ನಾ ಬರಿ ಭ್ರೂಣವಲ್ಲ
ನನ್ನ ಮುದ್ದಿನವ್ವ
ವರವ ಕೊಡು ತಾಯಿ
ನನ್ನ ಉಸಿರಿಗೆ
ನಿನ್ನ ಬಾಳ ಹೆಸರಿಗೆ
ಹೂ ತರುವೆನೇ ನಿನ್ನ ಹೆಸರಿಗೆ
ನಾ ಬರಿ ಭ್ರೂಣವಲ್ಲ"

ಭ್ರೂಣಾವಸ್ಥೆಯಲ್ಲಿರುವ ಹೆಣ್ಣು ಮಗುವು ತನ್ನ ತಾಯಿಯೊಂದಿಗೆ ನಡೆಸುವ ಆಪ್ತ ಸಂವಾದವನ್ನು ಈ ಕವಿತೆ ಚಿತ್ರಿಸುತ್ತದೆ. ತಾಯಿಯ ಗರ್ಭವೂ ತನಗೆ ಅತ್ಯಂತ ಸುರಕ್ಷಿತ ತಾಣವೆಂದು ಭಾವಿಸಿರುವ ಮಗುವಿಗೆ ತನ್ನ ಅಸ್ತಿತ್ವವನ್ನೇ ನಿರಾಕರಿಸುತ್ತಿರುವ ವ್ಯವಸ್ಥೆಯ ಧೋರಣೆಗಳು ಆತಂಕವನ್ನು ಸೃಷ್ಟಿ ಮಾಡಿದೆ. ಬದುಕಲು ಮಾತ್ರವಲ್ಲ ಹುಟ್ಟುವುದಕ್ಕೂ ಹೋರಾಟ ಮಾಡಬೇಕಾಗಿರುವ ಈ ವಿಷಮ ಪರಿಸ್ಥಿತಿಯಲ್ಲಿ ತಾಯಿಗೆ ಮಾತ್ರವೇ ತನ್ನನ್ನು ರಕ್ಷಿಸುವ ಶಕ್ತಿಯಿದೆ ಎಂಬ ಭರವಸೆಯೊಂದಿಗೆ ಹೊಟ್ಟೆಯೊಳಗಿನ ಮಗುವು ತನ್ನನ್ನು ಕಾಪಾಡುವಂತೆ ದೀನವಾಗಿ ಮೊರೆಯಿಡುವ ಚಿತ್ರಣ ನಾ ಬರಿ ಭ್ರೂಣವಲ್ಲ ಕವಿತೆಯಲ್ಲಿದೆ.

ಮಾಲತಿ ಪಟ್ಟಣಶೆಟ್ಟಿಯವರು ಇತ್ತೀಚೆಗೆ ನಾ ಬರಿ ಭ್ರೂಣವಲ್ಲ ಕವಿತೆಗೆ ಸಮವಾಗಿ 'ಬಂಡೆದ್ದ ಭ್ರೂಣ ನಾವು!'' ಎಂಬ ಕವಿತೆಯನ್ನು ರಚಿಸಿದ್ದಾರೆ. ಈ ಕವಿತೆ 'ಬಾಳೆಂಬ ವ್ರತ' ಕವಿತೆಯ ಸಂಗ್ರಹದಲ್ಲಿದೆ. ಇಲ್ಲಿಯೂ ಕೂಡ ಸ್ತ್ರೀಯ ಸ್ಥಿತಿಗತಿ ಸಮಾಜದಲ್ಲಿರುವ ಸ್ತ್ರೀಯ ಸ್ಥಾನಮಾನ ಸ್ತ್ರೀತ್ವವಾದ ಎದ್ದು ಕಾಣುತ್ತದೆ.

> ''ಉಂಡುಂಡು ದಿನದಿನದ ಸಾವು
> ಬಂಡೆದ್ದ ಭ್ರೂಣ ನಾವು
> ಸೇರುವುದಿಲ್ಲ ಓ ಅವ್ವ
> ತಪ್ಪಿಯೂ ನಿನ್ನ ಗರ್ಭಕ್ಕೆ
> ಸುಳಿಯಲಾರೆವೊ ಅಪ್ಪ
> ಒಪ್ಪುತ್ತ ನಿನ್ನ ಪೌರುಷ
> ತಾಯಿಯೆಂಬ ಮಾಯಾವಿ
> ಆಗಿರುವಿಯಲ್ಲಾ ಓ ಮೃತ್ಯು ದೇವತೆಯೆ!
> ಬೀಸಾಡಿ ಹೊರಡುತ್ತೀಯಲ್ಲ
> ಅಪ್ಪನೂ ಹೊಣೆಗೇಡಿ ಸನ್ಯಾಸಿ!
> ಕರೆಯಬೇಡಿ ನಮ್ಮ ತಿರುತಿರುಗಿ
> ವಿಷ ತುಂಬಿದ ನಿಮ್ಮ ಒಡಲಿಗೆ
> ರಮಿಸಬೇಡಿ ಪರಿಪರಿಯಿಂದ
> ಕಾಲ ಕಸವಾಗಿಸಲು ತಿಪ್ಪೆಗೆ!

ಇಂತಹ ಸಾಲುಗಳನ್ನು ನೋಡಿದಾಗ ಮಾಲತಿ ಪಟ್ಟಣಶೆಟ್ಟಿಯವರ ಕಷ್ಟದ ಅನುಭವಗಳೇ ಕವಿತೆಯ ಅನುಭವಗಳಾಗಿವೆ ಎಂಬುದು ಖಚಿತವಾಗುತ್ತದೆ. ಸ್ತ್ರೀಗೆ ಇರುವ ಸಮಸ್ಯೆಗಳು ಒಂದಲ್ಲಾ ಎರಡಲ್ಲಾ ಸಾಲು ಸಾಲುಗಳಿವೆ ಎಂಬ ಮಾತು ಈ ಕವಿತೆಯಲ್ಲಿ ಮಾರ್ಮಿಕವಾಗಿ ಕಂಡುಬರುತ್ತವೆ. ಹೆಣ್ಣಿನ ಬದುಕಿಗೆ ತಂದೆ ತಾಯಿ ಎಷ್ಟು ಮುಖ್ಯ ಎಂಬುದು ಕೂಡ ಅರಿವಾಗುತ್ತದೆ. ತಂದೆ ತಾಯಿ ಹೆಣ್ಣನ್ನು ಹೆತ್ತರೆ ಅಷ್ಟೇ ಅಲ್ಲ ಅವರ ಬದುಕಿಗೆ ಪೂರಕವಾಗಿ ನಿಂತು ಬದುಕನ್ನು ಹಸನಗೊಳಿಸಬೇಕು. ಸ್ತ್ರೀಯ ಜೀವನದಲ್ಲಿ ತಂದೆ ತಾಯಿಯ ಜವಾಬ್ದಾರಿ ಬಹಳ ದೊಡ್ಡದಿದೆ ಎಂಬುದು ಮಾಲತಿ ಪಟ್ಟಣಶೆಟ್ಟಿಯವರ ಮಾತಾಗಿದೆ.

> ''ಏಕೆ ಬರಬೇಕು ಹೇಳಿರಿ?
> ನಾವ್ ಮಾರಾಟಕ್ಕಿಟ್ಟ ವಸ್ತುವೆ?
> ಜೀತಕ್ಕೆ ತೇಗುವ ತೊತ್ತೇ?
> ಭಿಕ್ಷೆ ಬೇಡುವ ಮುಖವನ್ನು ಹೊತ್ತೇ?
> ಮಮತೆಯೇ ಮೂರ್ತಿಯಾದ ತಾಯಿ
> ಹೀಗೇಕೆ ಸೀಳುತ್ತಿ ಕತ್ತ ಮಾಯಾವಿ?
> ಎತ್ತಿ ಮುದ್ದಾಡುವ ತಂದೆಯೇ
> ಏಕೆ ಎಳೆಯುತ್ತೀ ವೇಶ್ಯೆಯ ದಂಧಗೆ??
> ಧಿಕ್ಕಾರ ನಿಮ್ಮ ಮಮತೆಗೆ
> ಧಿಕ್ಕಾರ ಮುಗ್ಧರ ತುಳಿತಕ್ಕೆ!

ಈ ಕವಿತೆಯಲ್ಲಿ ಹೆಣ್ಣಿನ ಅಂತರಂಗದ ನೋವು ಧ್ವನಿಸುತ್ತದೆ. ಈ ಸಮಾಜದಲ್ಲಿ ಹೆಣ್ಣಿಗೆ ಎಂತಹ ಸ್ಥಿತಿ ಇದೆ ಎಂಬುದು ಸ್ಪಷ್ಟವಾಗುತ್ತದೆ. ತಂದೆ ತಾಯಿ ಹೆಣ್ಣನ್ನ ರಕ್ಷಣೆ ಮಾಡಲಿಲ್ಲವೆಂದರೆ ಸಮಾಜ ಹೇಗೆ ರಕ್ಷಣೆ ಮಾಡೀತು ಎನಿಸುತ್ತದೆ. ಅದಕ್ಕಾಗಿ ಮಾಲತಿ ಪಟ್ಟಣಶೆಟ್ಟಿಯವರು ತಂದೆ ತಾಯಿಯ ಜೊತೆಗೆ ಸಮಾಜಕ್ಕೂ ಹಾಗೂ ಸಮಾಜದಲ್ಲಾಗುವ ಸ್ತ್ರೀಯ ನಷ್ಟಕ್ಕೂ ಧಿಕ್ಕಾರ ಧಿಕ್ಕಾರ ಎಂದು ಕೂಗುತ್ತಿದ್ದಾರೆ. ಜೊತೆಗೆ ಸ್ತ್ರೀತ್ವದ ಕುರಿತು ಧ್ವನಿ ಎತ್ತುತ್ತಿದ್ದಾರೆ. ಒಟ್ಟಿನಲ್ಲಿ ಹೆಣ್ಣು ಮಗುವನ್ನು ನಿರಾಕರಿಸುವ ನಿರ್ಲಕ್ಷಿಸುವ ಲಿಂಗ ತಾರತಮ್ಯ ಧೋರಣೆಯು ನಾಗರಿಕ ಸಮಾಜದಲ್ಲಿ ಹಲವಾರು ಗಂಭೀರ ಬಿಕ್ಕಟ್ಟುಗಳಿಗೆ ಕಾರಣವಾಗಿದೆ. ಹೆಣ್ಣನ್ನು ಕೇವಲ ದೇಹವಾಗಿ ಪರಿಭಾವಿಸದೆ ಅವಳ ಮನೋವ್ಯಕ್ತಿತ್ವವನ್ನು ಗೌರವಿಸುವ ಮಾನವೀಯ ಧೋರಣೆಯನ್ನು ಎಲ್ಲರೂ ಬೆಳೆಸಿಕೊಳ್ಳಬೇಕಾಗಿದೆ.

ಬದುಕಿನ ಎಲ್ಲಾ ರಂಗಗಳಲ್ಲೂ ತಾರತಮ್ಯಕ್ಕೆ ಅವಕಾಶವಿಲ್ಲದಂತೆ ಸ್ತ್ರೀ–ಪುರುಷರಿಬ್ಬರ ಸಮಾನ ಸಹಭಾಗಿತ್ವದಲ್ಲಿ ಸ್ವಸ್ಥ ಸಮಾಜದ ನಿರ್ಮಾಣ ಮಾಡಬೇಕಾಗಿರುವುದು ಇಂದಿನ ಅಗತ್ಯ ಎಂಬುದು ಮಾಲತಿ ಪಟ್ಟಣಶೆಟ್ಟಿಯವರ ಅನಿಸಿಕೆಯಾಗಿದೆ.

**ಆಧಾರ ಗ್ರಂಥಗಳು:**


1. ಪ್ರೊ. ಮಾಲತಿ ಪಟ್ಟಣಶೆಟ್ಟಿ: ಎಷ್ಟೊಂದು ನಾವೆಗಳು (ಕವನ ಸಂಕಲನ)
2. ಪ್ರೊ. ಮಾಲತಿ ಪಟ್ಟಣಶೆಟ್ಟಿ: ಬಾಳೆಂಬ ವ್ರತ (ಕವಿತಾ ಸಂಗ್ರಹ).
3. ಡಾ. ಸಿ.ಬಿ. ಹೊನ್ನಯ್ಯ (ಸಂ): ಕನ್ನಡ ಸಾಹಿತ್ಯ ಸಂಸ್ಕೃತಿ ಮೀಮಾಂಸೆ
4. ಡಾ. ಎಲ್.ಎಸ್ ಶೇಷಗಿರಿರಾವ್: ಹೊಸಗನ್ನಡ ಸಾಹಿತ್ಯ ಚರಿತ್ರೆ